# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20-ಗಂಗಾನಗರ, ಬೆಂಗಳೂರು.

ಸಂಖ್ಯೆ: ಸ.ಅ/ವಾ-20/ಪಿ.ಆರ್/05/2020-21 ದಿನಾಂಕ:21-11-2020.

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/20-21 ದಿನಾಂಕ:05-12-2020. ರವರ ಆದೇಶದಂತೆ ದಿನಾಂಕ: 05-12-2020 ರಂದು 9.30 ಗಂಟೆಗೆ ಬೆಳಗ್ಗೆ ವಾರ್ಡ್ ನಂ:20 ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### "ಸಭೆಗೆ ಹಾಜರಾಗಿದ್ದವರ ವಿವರಗಳು"

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 01 | ಶ್ರೀ ಬಿ.ಎಸ್ ಪ್ರಹಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 02 | ರಾಮ್‌ರಾವ್ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.20 |
| 03 | ಶ್ರೀನಿವಾಸ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 20, ಸದಸ್ಯರು |
| 04 | ಸುವರ್ಣ ದೇವಿ | ಸದಸ್ಯರು |
| 05 | ಭವ್ಯ ಅನು ಎ.ವಿ | ವಕೀಲರು |
| 06 | ರವಿ ಆರ್ | ಆರ್.ಬಿ ಐ ಕಾಲೋನಿ |
| 07 | ಶಲೀನಿ | ಆರ್.ಡ್ಬ್ಲೂ.ಎ |
| 08 | ಜಗನಾಥ್ | ಸಾರ್ವಜನಿಕರು |
| 09 | ಸೌದರ್ ರಾಜ್ | ಸಾರ್ವಜನಿಕರು |
| 10 | ಆನಂದ ಪಿ.ಸಿ | ಜೆ.ಇ ವಿದ್ಯುತ್ ವಿಭಾಗ ಬಿಬಿಎಂಪಿ |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಬಿ.ಎಸ್ ಪ್ರಹಲಾದ್ ಮತ್ತು ಕಾರ್ಯದರ್ಶಿಗಳಾದ ಶ್ರೀ ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ: 20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ವಾರ್ಡ್ ಸಂಖ್ಯೆ 20 ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ತ್ಯಾಜ್ಯ ವಿಗಂಡಣೆಯ ಬಗ್ಗೆ ಸಾರ್ವಜನಿಕರುಗಳಲ್ಲಿ ರಿವು ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರಿಗೆ ಸೂಚಿಸಲಾಯಿತು.
- ವಾರ್ಡ್ ಪ್ರದೇಶಗಳಲ್ಲಿನ ಆಟೋ ಟಿಪ್ಪರ್ ವಾಹನಗಳಲ್ಲಿ ಕೆಲಸವೊಂದಕ್ಕೆ ಮೈಕ್ ಇಲ್ಲದಿರುವುದು ಕಂಡುಬಂದಿದ್ದು ಈ ಕೂಡಲೇ ಮೈಕ್ ಅಳವಡಿಸಲು ಸೂಚಿಸಲಾಯಿತು.
- ಕಸ ಸಂಗ್ರಹಣೆ ಮತ್ತು ಸಗಣಿಕೆಯ ಕೆಲಸವನ್ನು ಸರ್ಮಪಕವಾಗಿ ನಿರ್ವಹಿಸಲು ಅಗತ್ಯ ಕ್ರಮ ವಹಿಸುವಂತೆ ಸಂಬಂಧಪಟ್ಟ ಘನತ್ಯಾಜ್ಯ ನಿರ್ವಹಣ ಕೋಶದ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಖಾಲಿ ಸ್ಥಳಗಲ್ಲಿ ತ್ಯಾಜ್ಯವನ್ನು ಹಾಕುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರುಗಳಿಗೆ ತುಂಬ ತೊಂದರೆಯಾಗುತ್ತಿರುವುದರಿಂದ ಅಂತಹ ಸ್ಥಳಗಳನ್ನು ಗುರುತಿಸಿ ಸ್ವಚ್ಛಗೊಳಿಸುವಂತೆ ಸೂಚಿಸಲಾಗಿದೆ.